ಶ್ರೀ ಎಂ. ಬಿ. ರಾಮಸ್ವಾಮಿ.—ಕೆಲವರು ಬರವದಾತರು ಆದರೂ ಕೂಡ ಅವರಿಗೆ ಪೋಟಿಗೆ ತಲಪದೆ ಇರತಕ್ಕದ್ದು, ತಮ್ಮ ಗಮನಕ್ಕೆ ತಂದರೆ ಅದರ ಬಗ್ಗೆ ಏನು ಕಾರ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಂಥವುಗಳನ್ನು ಸರ್ಕಾರದ ಗಮನಕ್ಕೆ ತಂದರೆ ಅವುಗಳ ಬಗ್ಗೆ ಕೂಡಲೇ ಕಾರ್ಯಕ್ರಮ ತೆಗೆದುಕೊಂಡು ಕೊಡುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಶರಣಪ್ಪ.—ರಾಯಚೂರು ಜಿಲ್ಲೆಯಲ್ಲಿ 1964ರಿಂದ ಕೆಲಸ ಮಾಡುತ್ತಿದ್ದ ಶ್ಯಾನು ಭೋಗರಿಗೆ ಪೋಟಿಗೆ ಮತ್ತು ವೇತನಗಳನ್ನು ಕೊಟ್ಟಿಲ್ಲವೆಂಬುದರ ಬಗ್ಗೆ ಅವರು ಮನವಿಯನ್ನು ನಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದರೆ ಅವುಗಳ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನನಗೆ ಬಂದಿರತಕ್ಕಂತಹ ಸಮಾಚಾರದ ಪ್ರಕಾರ ಎಲ್ಲರಿಗೂ ಪೋಟಿಗೆ ಪಾವತಿಯಾಗಿದೆ. ಬಾಕಿ ಯಾರಿಗೂ ಇಲ್ಲವೆಂಬುದು ಅಂಕಿ ಅಂಶಗಳಿಂದ ಗೊತ್ತಾಗುತ್ತದೆ.

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್.—ತಾವು ಈಗ ಯಾವುದೂ ಬಾಕಿ ಇಲ್ಲವೆಂದು ಉತ್ತರ ಹೇಳುತ್ತಿದ್ದೀರಿ. ನೂರಾರು ಜನರಿಗೆ ಕೊಡತಕ್ಕದ್ದು ಬಾಕಿ ಇದೆ. ಅದರ ಬಗ್ಗೆ ಬೇಗನೇ ತೀರ್ಮಾನ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಖಂಡಿತವಾಗಿಯೂ ಮಾಡಬಹುದು.

ಅಧ್ಯಕ್ಷರು.—ಪ್ರಶ್ನೆ ನಂ. 58 ಮತ್ತು 60 ಜತೆಗೆ ತೆಗೆದುಕೊಳ್ಳೋಣ.

RELEASE OF WATER TO ANDHRA

58. Sri B. SATHYANARAYANA SINGH (Hospet).—

Will the Minister of State for Major Irrigation be pleased to state :—

(*a*) whether it is a fact that the inflow of water in May 1972 have been wrongly gauged by the Tungabhadra Board, if so, the step taken to set right this mistake;

(*b*) whether the Government has received any reports from Tungabhadra Reservoir Circle, Munirabad, in this regard;

(*c*) whether it is a fact that the Secretary of the Tungabhadra Board was absent when Andhra was allowed to draw 3 T.M. Cft. water in April 1972;

(*d*) whether the Superintending Engineer representing Andhra was officiating as Secretary in April, 1972 when water to Andhra was released;

(*e*) if so, whether the acting Secretary has manoeuvred to allow more than 3 T.M.Cft. of water to Andhra in April, 1972 ?

Sri H. N. NANJE GOWDA (Minister of State for Major Irrigation).—

(*a*) No. It is correctly gauged.

(*b*) Yes.

(*c*) Yes.

(*d*) Yes.

(*e*) No.

CALCULATION OF WATER RELEASED TO ANDHRA

60. Sri B. SATHYANARAYANA SINGH (Hospet).—

Will the Minister of State for Major Irrigation be pleased to state :—

(*a*) whether it is a fact that the water given to Andhra is not being actually gauged but is calculated on quantum basis ;

(*b*) if so, the steps taken by Government to press the T.B. Board to actually gauge the water that is being supplied to Andhra ;

(*c*) whether it is a fact that working tables prepared by Central Water and Power Commission are implemented only during December to June period ;

(*d*) if so, the basis on which the total quota of water supplied to Andhra throughout the year is arrived at ?

Sri H. N. NANJE GOWDA (Minister of State for Major Irrigation).—

(*a*) No. It is properly gauged.

(*b*) In view of reply to clause (*a*) above does not arise.

(*c*) No.

(*d*) On the basis of water let down from the spillway and sluices.

ತಾವು ಉಪಪ್ರಶ್ನೆಗಳನ್ನು ಕೇಳುವುದಕ್ಕೆ ಮುಂಚೆ ಒಂದು ತಿದ್ದುಪಡಿ ಮಾಡಬೇಕಾಗಿದೆ. (ಇ) ಯಲ್ಲಿ ಕಾರ್ಯದರ್ಶಿಯವರು ಗೈರುಹಾಜರು ಆಗಿದ್ದುದು ನಿಜವೇ ಎಂದು ಕೇಳಿದ್ದಾರೆ. ಆಗ ಅವರು ರಜಾದ ಮೇಲೆ ಇದ್ದರು.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ಆಂಧ್ರ ರಾಜ್ಯಕ್ಕೆ 3 ಟಿ.ಎಂ.ಸಿ.ಎಫ್. ನೀರು ಕೊಡುವುದಕ್ಕೆ ಒಪ್ಪಿದ್ದೀರಿ. ಆದರೆ ಆದು ಕಾರ್ಯಗತವಾಗುವಾಗ 5 ಟಿ.ಎಂ.ಸಿ.ಎಫ್.ಟಿ ನೀರು ಕೊಟ್ಟಿದ್ದಾರೆಂದು ತಿಳಿದು ಬಂದಿದೆ. ದೆಲ್ಲಿಯಲ್ಲಿ ಹೋದ ಸಲ ನಡೆದ ತಜ್ಞರ ಸಭೆಯಲ್ಲಿಯೂ ಇದನ್ನು ಚರ್ಚೆ ಮಾಡಿದ್ದಾರೆ. ಇದರ ಬಗ್ಗೆ ಟಿ.ಬಿ. ಬೋರ್ಡಿನೊಡನೆ ವ್ಯವಹಾರ ನಡೆಸಿ ಎಷ್ಟು ನೀರು ಖಚಿತವಾಗಿ ತೆಗೆದುಕೊಂಡಿದ್ದಾರೆಂಬುದನ್ನು ನಿರ್ಣಯ ಮಾಡಿದ್ದೀರಾ ? ಮತ್ತು ಅವರಿಗೆ ಹೀಗೆ ನೀರು ಕೊಟ್ಟಿದುದರಿಂದ ತುಂಗಭದ್ರಾದ ಪ್ರದೇಶದಲ್ಲಿರುವ ರೈತರಿಗೆ ನೀರು ಸಾಕಷ್ಟು ಸಿಗದೆ ಬಹಳ ತೊಂದರೆ ಪಡುತ್ತಿದ್ದಾರೆ ಇದನ್ನು ಹೋಗತಾಡಿಸಲು ತಾವು ಅವರಿಂದ ನೀರನ್ನು ವಾಪಸ್ಸು ಪಡೆಯುವುದಕ್ಕೆ ಏನಾದರೂ ಪ್ರಯತ್ನ ಮಾಡಿದ್ದೀರಾ ?